ಹಾಗಾಗಿ ಕಾವೇರಿ ಎರಡನೇ ಹೆಂಡ್ತಿಯೂ ಅಲ್ಲ" ಬಾಂಬ್ ಸಿಡಿಸಿದಳಾಕೆ.

ಬೆಚ್ಚಿ ಬಿದ್ದರು ಸಂಪಾದಕರು. ಕನಸಿನಲ್ಲಿಯೂ ಎಣಿಸದೇ ಇದ್ದ ಕಂಪ್ಲೇಂಟು!

"ನೀವಿದೇನು ಹೇಳುತ್ತಾ ಇದ್ದೀರಿ... ಯಾರು ನೀವು?" ಗಡಬಡಿಸಿ ಕೇಳಿದರು.

"ಲಕ್ಷ್ಮಿ ಶಿವಣ್ಣನ ಎರಡನೇ ಹೆಂಡ್ತಿ, ಕಾವೇರಿ ಮೂರನೇಯವಳು... ಹಾಗೆ ನಾಳೆ ತಿದ್ದುಪಡಿ ಹಾಕಿ" ಹೆಚ್ಚುಕಡಿಮೆ ನಿರ್ದೇಶನವನ್ನೇ ಕೊಟ್ಟಳಾಕೆ.

"ಅಲ್ಲಮ್ಮಾ... ಯಾರು, ಏನು ಅಂತ ಗೊತ್ತಿಲ್ದೆ ಯಾರೋ ಮಹಿಳೆ ಒಬ್ಬಳು ಫೋನ್ ಮಾಡಿ ಎಮ್ಮೆಲ್ಲೆಯವರ ಹೆಂಡಂದಿರ ಬಗ್ಗೆ ಹೀಗಂದ್ರು ಅಂತ ಪೇಪರಿನಲ್ಲಿ ಬರೆಯುವುದಕ್ಕೆ ಆಗುತ್ತದೆಯೇ? ಹಾಗಾದ್ರೆ ಮೊದಲನೇಯವಳು ಯಾರು ಅನ್ನುತ್ತಾರೆ. ನಾಳೆ ಇನ್ನೊಬ್ಬರು ಫೋನ್ ಮಾಡಿ ಇನ್ನೇನೋ ಹೇಳ್ತಾರೆ. ನಾವು ಇದನ್ನೆಲ್ಲ ಹುಡುಕುತ್ತಾ ಬರೆಯುತ್ತಾ ಕೂರೋಕ್ಕಾಗುತ್ತದೆಯೇ? ಪಬ್ಲಿಕ್ಕು ಪ್ರೂಫ್ ಕೇಳುತ್ತದೆ. ಶಿವಣ್ಣ ನಮ್ಮೆದುರು ಮಾನನಷ್ಟ ಕೇಸು ಹಿಡಿದು ಕೋರ್ಟಿಗೆ ಹೋಗುತ್ತಾರೆ. ಪೇಪರೂ ಅಂದ್ರೆ ನೀವು ತಿಳ್ಕೊಂಡ ಹಾಗೆ ಹುಡುಗಾಟ ಅಲ್ಲಮ್ಮ" ಅಂದರು ಕೋಪದಿಂದ.

"ಸಾರ್, ನೀವು ಹೇಳಿದ ಹಾಗೆ ನಾಳೆ ಇನ್ನೊಬ್ಬರು ಫೋನ್ ಮಾಡಿದ್ರೂ ಮಾಡಿಯಾರು. ಶಿವಣ್ಣನ ಬಗೆಗೆ ನಾನೇನೂ ಭರವಸೆ ಕೊಡಲಾರೆ. ಲಕ್ಷ್ಮಿ ಮೊದಲ ಹೆಂಡ್ತಿಯಲ್ಲ ಅಂತ ಮಾತ್ರ ಖಡಾಖಂಡಿತವಾಗಿ ಹೇಳಬಲ್ಲೆ. ಲಕ್ಷ್ಮಿಗಿಂತ ಮೊದಲೇ ಶಿವಣ್ಣನವರಿಗೆ ಬೇರೆ ಮದುವೆಯಾಗಿತ್ತು ಅಂತ ಪುಷ್ಪಾ ಅನ್ನುವ ಮಹಿಳೆ ತಕರಾರು ತೆಗೆದಿದ್ದಾರೆ ಎಂದಷ್ಟೇ ತಿದ್ದುಪಡಿ ಹಾಕಿ, ಸಾಕು" ಯಾವುದೇ ಭಾವೋದ್ವೇಗ ತೋರಿಸದೆ ನುಡಿದಳಾಕೆ.

"ಹಾಗೆಲ್ಲ ಬಾಯಿಮಾತು ನಂಬಿ ಪೇಪರಿನಲ್ಲಿ ಪ್ರಕಟಿಸಲು ಬರುವುದಿಲ್ಲ. ಆ ಮದುವೆ ಎಲ್ಲಿ ಆಯಿತು? ಯಾರೆಲ್ಲ ಬಂದಿದ್ದರು? ಆ ಹೆಂಡತಿ ಯಾರು? ಎಲ್ಲಿದ್ದಾರೆ? ಇದರ ಬಗ್ಗೆ ನಿಮಗೆ ಏನಾದರೂ ತಿಳಿದಿದೆಯೇ? ನಿಮ್ಮಲ್ಲಿ ಪ್ರೂಫ್ ಏನಾದ್ರೂ ಇದೆಯೇ?" ಮತ್ತೆ ಸಿಡುಕಿನಿಂದ ಕೇಳಿದರು ಸಂಪಾದಕರು.

"ನಿಮ್ಮ ವಾಟ್ಸ್ಆ್ಯಪ್‌ಗೆ ಮೂರು ಫೋಟೊ ಕಳುಹಿಸಿದ್ದೇನೆ. ನಾನೇ ಪುಷ್ಪಾ, ನನಗೆ ತಿಳಿದ ಹಾಗೆ ನಾನೇ ಶಿವಣ್ಣನ ಮೊದಲನೇ ಹೆಂಡ್ತಿ. ಮಾರುತಿ ಮಂದಿರದಲ್ಲಿ ನಾನು ಶಿವಣ್ಣನಿಗೆ ಮಾಲೆ ಹಾಕಿದ್ದು ಮೊದಲನೇ ಫೋಟೊ. ಶಿವಣ್ಣ ನನಗೆ ಮಾಲೆ ಹಾಕಿದ್ದು ಎರಡನೇದ್ದು. ಅವರ ಇಬ್ಬರು ಗೆಳೆಯರು ಮತ್ತು ನನ್ನ ಚಿಕ್ಕಮ್ಮನೊಂದಿಗೆ ನಾವು ಗಂಡಹೆಂಡಿರು ಒಟ್ಟಿಗೆ ನಿಂತು ತೆಗೆಸಿಕೊಂಡ ಫೋಟೊ ಮೂರನೇದ್ದು. ಇನ್ನು ನೀವೇನು ಮಾಡ್ತೀರೋ ಅದು ನಿಮಗೆ ಬಿಟ್ಟದ್ದು" ಅನ್ನುತ್ತ ಫೋನ್ ಇಟ್ಟಳಾಕೆ.

ತಲೆಕೆರೆದುಕೊಳ್ಳುತ್ತ ರಿಸೀವರ್ ಇಟ್ಟು ಸಂಪಾದಕರು ಸೆಲ್ ಫೋನು ಕೈಗೆತ್ತಿಕೊಂಡಾಗ ವಾಟ್ಸ್ಆ್ಯಪ್ ಮೂರು ಬಾರಿ 'ಟಿಂಗ್ ಟಿಂಗ್ ಟಿಂಗ್' ಸದ್ದು ಮಾಡಿತು.

## ಗೋಪೀನಾಥ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟ್ಪಾಡಿ. ತಂದೆ ಪ್ರಸಿದ್ಧ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ತಾಯಿ ಮುತ್ತಮ್ಮ. ವೃತ್ತಿಯಲ್ಲಿ ಲೆಕ್ಕಪರಿಶೋಧಕ. ಪ್ರಸ್ತುತ ದುಬೈಯಲ್ಲಿ ಉದ್ಯೋಗ. 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?' ಅವರ ಪ್ರಕಟಿತ ಕಥಾಸಂಕಲನಗಳು.